Sri H. M. CHANNABASAPPA (Minister for Public Works and Electricity).—

(*a*) No.

(*b*) and (*c*) Does not arise in view of reply to clause (*a*) above.

ಶ್ರೀ ಎಚ್. ಎಸ್. ಸಿದ್ಧಪ್ಪ.—ಬೆಂಡೇಕೆರೆ ಬಳಿ ಅನೇಕಾವರ್ತಿ ಪ್ರತಿವರ್ಷದಲ್ಲೂ ಅಕ್ಸಿಡೆಂಟು ಗಳು ಆಗುತ್ತಿದ್ದು, ಮನೆಯಲ್ಲಿ ಮಲಗಿದ್ದವರೂ ಕೂಡ ಒಬ್ಬಿಬ್ಬರು ಸತ್ತಿರುತ್ತಾರೆಂಬ ವಿಷಯ ಸರ್ಕಾರದವರಿಗೆ ಗೊತ್ತಿಲ್ಲವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಜಾಗದಲ್ಲಿ ಅನಾಹುತಗಳಾಗತಕ್ಕದ್ದು ಸರ್ಕಾರದವರಿಗೂ ಗೊತ್ತಿದೆ. ಆದುದರಿಂದಲೇ ನಾನೇ ತಾ: 23-8-1972 ರಲ್ಲಿ ಸ್ಥಳಕ್ಕೆ ಹೋಗಿ ಅದನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ಆದರ ಬಗ್ಗೆ ಅಂದಾಜುಗಳು ತಯಾರಾಗುತ್ತಿವೆ. ಅದು ಬಂದ ಕೂಡಲೆ ತಕ್ಷಣ ಕ್ರಮವನ್ನು ಕೈಗೊಳ್ಳಲಾಗುತ್ತದೆ.

## Opening of Ring Road for Traffic

323. Sri B. SATHYANARAYANA SINGH (Hospet).—

Will the Minister for Public Works and Electricity be pleased to state:—

(*a*) whether a Ring road to bypass Hospet City has been constructed on the bank of High Level Canal ;

(*b*) whether the said Ring Road was ready about six months back ;

(*c*) whether the said road has been opened for traffic ; if not, the steps the Government proposes to take to open the road for traffic ?

Sri H. M. CHANNABASAPPA (Minister for Public Works and Electaicity).—

(*a*) Yes.

(*b*) No.

(*c*) No. Action is being taken to complete all the C. D. works on the road to open the road for traffic.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸಿ. ಡಿ. ಕಾಮಗಾರಿಗಳನ್ನು ಇನ್ನೆಷ್ಟು ದಿವಸಗಳಲ್ಲಿ ಮುಗಿಸಲಾಗುತ್ತದೆ. ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಷ್ಟೂ ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಆದರೆ ಇತ್ತೀಚೆಗೆ ತುಂಗಭದ್ರಾ ಬೋರ್ಡಿನವರಿಗೂ ಮತ್ತು ಅಧಿಕಾರಿಗಳಿಗೂ ಅಲ್ಲಿ ಸ್ವಲ್ಪ ವಾದ ವಿವಾದಗಳು ನಡೆಯುತ್ತಿವೆಯೆಂದು ಕೇಳಿಬರುತ್ತಿದೆ. ಹಾಗೇಕೆ ನಡೆಯುತ್ತಿದೆ ಎಂಬುದನ್ನು ಪರಿಶೀಲಿಸಿ ಅದಷ್ಟೂ ಬೇಗ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈ ರಸ್ತೆಯಾಗಿ ಒಂದು ವರ್ಷವಾಗಿದೆ. ಇದರ ಬಗ್ಗೆ ವಾದವಿವಾದವಿದೆಯೆಂದು ಹೇಳಿದಿರಿ. ಅದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಸ್ತೆ ತಯಾರಾಗಿದೆ, ಕ್ರಾಸ್ ಡ್ರೈನೇಜ್ ಕೆಲಸ ಪೂರ್ತಿಯಾಗಿಲ್ಲ. ತುಂಗಭದ್ರ ಬೋರ್ಡ್ 1962-63 ರಲ್ಲಿ ಕೆಲಸ ನಿಲ್ಲಿಸಿ ಕಾಂಕ್ರೀಟಾಗಿದೆ. ಮತ್ತೆ ಏನು ಕಾರಣದಿಂದ ತಡವಾಗುತ್ತಿದ್ದಾರೆ ಎಂದು ಎಸ್ಟೇರ್ಟ್ ಮಾಡಿ ನೋಡಿ ಕ್ರಮ ತೆಗೆದುಕೊಳ್ಳುತ್ತೇವೆ.